# ಇದು ಇನ್‌ಸ್ಟಾಗ್ರಾಂ ‘ರೀಲ್ಸ್’




■ **ಶಶಿಕುಮಾರ್ ಸಿ.**

ಕಿರು ವಿಡಿಯೊ ಮಾಡಲು ಮತ್ತು ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ಅನುವು ಮಾಡಿಕೊಡುವ ಹೊಸ ಮಾದರಿಯ ‘ರೀಲ್ಸ್’ ಎಂಬ ಫೀಚರ್ ಅನ್ನು ಇನ್‌ಸ್ಟಾಗ್ರಾಂ ಪರಿಚಯಿಸಿದೆ. ಭಾರತದಲ್ಲಿ ಇದು ಇನ್ನು ಟೆಸ್ಟಿಂಗ್ ಹಂತದಲ್ಲಿದ್ದು, ಬಳಕೆದಾರರಿಗೆ ಕೆಲವೇ ದಿನಗಳಲ್ಲಿ ಬಳಕೆದಾರರಿಗೆ ಇದು ಲಭ್ಯವಾಗಲಿದೆ.

ಕಿರುಅವಧಿಯ ಮನರಂಜನೆ ಮತ್ತು ಇತರ ವಿಡಿಯೊ ರಚನೆಯ ಆ್ಯಪ್ ಆಗಿ ಜನಪ್ರಿಯತೆ ಗಳಿಸಿದ್ದ ಚೀನಾ ಮೂಲದ ‘ಟಿಕ್‌ಟಾಕ್’ ಅನ್ನು ದೇಶದಲ್ಲಿ ನಿಷೇಧಿಸಲಾಗಿದ್ದು, ಅದರ ಬೆನ್ನಲ್ಲೇ ಇನ್‌ಸ್ಟಾಗ್ರಾಂ ‘ಟಿಕ್‌ಟಾಕ್’ ಮಾದರಿಯ ಈ ಫೀಚರ್‌ನತ್ತ ಮುಖಮಾಡಿದೆ. ಇದರಲ್ಲಿ 15 ಸೆಕೆಂಡ್‌ಗಳ ವಿಡಿಯೊವನ್ನು ಲಿಪ್‌ಸಿಂಕ್ ಅಥವಾ ಬ್ಯಾಕ್‌ಗ್ರೌಂಡ್ ಆಡಿಯೊ ಮೂಲಕ ರಚಿಸಿ ಹಂಚಿಕೊಳ್ಳಬಹುದು.

ದೇಶದಲ್ಲಿ ಈಗಾಗಲೇ ರೋಪೊಸೊ, ಚಿಂಗಾರಿ ಮತ್ತು ಮಿತ್ರೋ ಹಾಗೂ ಇತರ ಹಲವು ಟಿಕ್‌ಟಾಕ್ ಮಾದರಿಯ ಆ್ಯಪ್‌ಗಳಿವೆ. ಅದರ ಜತೆಗೆ ಇನ್‌ಸ್ಟಾಗ್ರಾಂ ರೀಲ್ಸ್ ಕೂಡ ಬಿಡುಗಡೆಯಾಗಿದ್ದು, ಇನ್‌ಸ್ಟಾಗ್ರಾಂ ಬಳಕೆದಾರರು ತಮ್ಮದೇ ರೀಲ್ಸ್ ರಚಿಸಿ, ಇನ್‌ಸ್ಟಾ ಪೋಸ್ಟ್ ಮಾಡಬಹುದಾಗಿದೆ. ವಿವಿಧ ರೀತಿಯ ಮ್ಯೂಸಿಕ್ ಟ್ರ್ಯಾಕ್, ಫಿಲ್ಟರ್ ಮತ್ತು ಎಆರ್ ಫೀಚರ್‌ಗಳನ್ನು ಇದು ಹೊಂದಿದ್ದು, ದೇಶದ 25ಕ್ಕೂ ಅಧಿಕ ಭಾಷೆಗಳ 10,000ಕ್ಕೂ ಹೆಚ್ಚು ಹಾಡುಗಳು ಲಭ್ಯವಿದೆ.

### ಬಳಕೆ ಹೇಗೆ?

ಮೊದಲು ಇನ್‌ಸ್ಟಾಗ್ರಾಂ ಆ್ಯಪ್ ತೆರೆದು ಅದರಲ್ಲಿನ ಕ್ಯಾಮೆರಾ ಆಯ್ಕೆಯನ್ನು ಪ್ರವೇಶಿಸಬೇಕು. ಪರದೆಯ ಕೆಳಭಾಗದಲ್ಲಿ ರೀಲ್ಸ್ ಸೇರಿದಂತೆ ಹಲವಾರು ಫೀಚರ್‌ಗಳು ಇರುತ್ತದೆ. ಅದರಲ್ಲಿ ರೀಲ್ಸ್ ಆಯ್ದುಕೊಂಡು ಬಳಸಬಹುದು. ಆಡಿಯೊ ಆಯ್ಕೆಯನ್ನು ಕ್ಲಿಕ್ಕಿಸಿದರೆ ಇನ್‌ಸ್ಟಾಗ್ರಾಂ ಮ್ಯೂಸಿಕ್ ಲೈಬ್ರರಿ ತೆರೆದುಕೊಳ್ಳುತ್ತದೆ.

ಟಿಕ್‌ಟಾಕ್ ಮಾದರಿಯಲ್ಲಿ ನಿಮ್ಮ ಸ್ವಂತ ಧ್ವನಿಯನ್ನೂ ಇದರಲ್ಲಿ ಬಳಸಬಹುದು. ಮೊದಲು ಆಡಿಯೊ ರೆಕಾರ್ಡ್ ಮಾಡಿಕೊಂಡು ನಂತರ ಅದನ್ನು ರೀಲ್ಸ್‌ನಲ್ಲಿ ಬಳಸಿ. ಟೈಮರ್ ಆಯ್ಕೆಯೂ ಇದರಲ್ಲಿದ್ದು, ಅದನ್ನು ಆನ್ ಮಾಡಿ ವಿಡಿಯೊ ರೆಕಾರ್ಡ್ ಮಾಡಬಹುದು. ಆಡಿಯೊ ಮತ್ತು ವಿಡಿಯೊವನ್ನು ವೇಗ ಮತ್ತು ನಿಧಾನಕ್ಕೆ ಪ್ಲೇ ಆಗುವಂತೆ ಮಾಡುವ ಆಯ್ಕೆಯೂ ಲಭ್ಯವಿದೆ. ■

## ಮಾಲ್‌ವೇರ್ ಟಿಕ್‌ಟಾಕ್ ಪ್ರೊ!

ಟಿಕ್‌ಟಾಕ್ ನಿಷೇಧದ ಬೆನ್ನಲ್ಲೇ, ಟಿಕ್‌ಟಾಕ್ ಪ್ರೊ ಎಂಬ ನಕಲಿ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಕಾಣಿಸಿಕೊಂಡಿದ್ದು, ಇದನ್ನು ಡೌನ್‌ಲೋಡ್ ಮಾಡುವ ಬಳಕೆದಾರರ ಸ್ಮಾರ್ಟ್‌ಫೋನ್‌ಗಳಲ್ಲಿ ಮಾಲ್‌ವೇರ್ ಹರಡಲು ಹೊಂಚು ಹಾಕುತ್ತಿದೆ ಎನ್ನಲಾಗಿದೆ.

ಜೊತೆಗೆ, ‘ಟಿಕ್‌ಟಾಕ್ ಬದಲಿಗೆ ಅದೇ ಕಂಪನಿಯ ಟಿಕ್‌ಟಾಕ್ ಪ್ರೊ ಎನ್ನುವ ಆವೃತ್ತಿ ಈಗ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದ್ದು, ಅದನ್ನು ಡೌನ್‌ಲೋಡ್ ಮಾಡಿಕೊಳ್ಳಿ’ ಎಂಬ ಸುದ್ದಿಯನ್ನು ವಂಚಕರು ವಾಟ್ಸ್‌ಆ್ಯಪ್ ಮೂಲಕ ಹರಿಬಿಟ್ಟಿದ್ದಾರೆ. ಅದನ್ನು ನಂಬಿ ಆ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಳ್ಳುವವರ ಸ್ಮಾರ್ಟ್‌ಫೋನ್‌ಗೆ ಮೊದಲು ಮಾಲ್‌ವೇರ್ ಹರಡುವ ಸೈಬರ್ ವಂಚಕರು ನಂತರ ಅದರಲ್ಲಿನ ಸಂಪೂರ್ಣ ಮಾಹಿತಿಯನ್ನು ಕದ್ದು ತಮಗೇ ಬೇಕಾದಂತೆ ಬಳಸಿಕೊಳ್ಳಲಿದ್ದಾರೆ.


Enjoy Tiktok Videos and also make Creative Videos again. Now Tiktok is only Available in (Tiktok pro) So Download from below.

Link: http://tiny.cc/TiktokPro

ಹೀಗಾಗಿ ಅಂತಹ ಯಾವುದೇ ವಾಟ್ಸ್‌ಆ್ಯಪ್ ಸಂದೇಶ ಬಂದರೂ, ಅದನ್ನು ನಿರ್ಲಕ್ಷಿಸಿ. ಸರ್ಕಾರ ಚೀನಾ ಆ್ಯಪ್ ಮೇಲಿನ ನಿರ್ಬಂಧವನ್ನು ಹಿಂಪಡೆದಿಲ್ಲ. ಜೊತೆಗೆ ಟಿಕ್‌ಟಾಕ್ ಕೂಡ ಪ್ರೊ ಆವೃತ್ತಿಯನ್ನು ಬಿಡುಗಡೆ ಮಾಡಿಲ್ಲ ಎಂಬುದನ್ನು ಗಮನಿಸಿ.

